ಒ ಎಸ್ 273/2022 ಪಿ.ಡಬ್ಲ್ಯೂ 1

ಇಂದು ದಿಃ 11.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಹೇಳುವ ಜಮೀನು ಬಿಡಿಸಿಕೊಡಬೇಕೆಂದು ದಾವೆ ಸಲ್ಲಿಸಿದ್ದೇನೆ. ದಾವಾ ಆಸ್ತಿಯು ನನ್ನ ತಾತ ಕ್ರಯಕ್ಕೆ 1943ರಲ್ಲಿ ಕೆಂಪಮ್ಮರವರಿಂದ ಖರೀದಿಸಿದ್ದರು. ಕೆಂಪಮ್ಮ ಯಾರ ಮಗಳು ಎಂದು ಗೊತ್ತಿಲ್ಲ. ಆ ದಿನದಿಂದ ಇಲ್ಲಿಯವರೆಗೂ ನಾನೇ ದಾವೆ ಆಸ್ತಿಯಲ್ಲಿ ಸ್ವಾಧೀನ ಇದ್ದೇನೆ. ದಾವೆಯಲ್ಲಿ ಪರಿಹಾರದ ಕಲಂ ಅನ್ನು ನಾನು ಓದಿದ್ದೇನೆ. ಸಿಂಧುವಳ್ಳಿ ಪುರ ಗ್ರಾಮದಲ್ಲಿ ಸರ್ವೆ ನಂ. 8 ಮತ್ತು 9 ರಲ್ಲಿ 4 ಎಕರೆ 18 ಗುಂಟೆ ಮತ್ತು 2 ಎಕರೆ 25 ಗುಂಟೆ ಜಮೀನನ್ನು ನನ್ನ ತಾತ ಖರೀದಿಸಿದ್ದರು. ಕೆಂಪಮ್ಮನವರು 1938 ರಲ್ಲಿ ಖರೀದಿಸಿದ ಆಸ್ತಿಯಾಗಿದ್ದು ಅದನ್ನು ಅವರ ಜಿವಿತ ಕಾಲದಲ್ಲಿ ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸುಳ್ಳು. ಆ ಕಾರಣ ನಿಪಿ 2 ರಲ್ಲಿ ಕಂಡುಬರುವ ಸಹಿಯೂ ಸಹ ಕೆಂಪಮ್ಮನವರದಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹಾಜರುಪಡಿಸಿರುವ ಇತರೆ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಸಲ್ಲಿಸಿದ ಒ ಎಸ್ 196/2021ರ ದಾವೆಯ ಬಗ್ಗೆ ನನಗೆ ಗೊತ್ತು. ಆ ದಾವೆಯಲ್ಲಿ ನಾನು ವಕೀಲರನ್ನು ನೇಮಿಸಿಕೊಂಡಿದ್ದೇನೆ. ಆ ದಾವೆ ಸಲ್ಲಿಸಿದ ನಂತರ ನಾನು ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

ನಿಪಿ 2 ರ ಕ್ರಯ ಪತ್ರದ ಅಕ್ಷರಗಳು ಏರುಪೇರು ಅಥವಾ ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ಒತ್ತುವರಿಯಾದ ಆಸ್ತಿಯ ಬಗ್ಗೆ ನಾವು ದೂರು ಇತ್ಯಾದಿ ಕೊಟ್ಟಿಲ್ಲ. ನೇರವಾಗಿ ದಾವೆ ಸಲ್ಲಿಸಿದ್ದೇವೆ. ಆ ಪೂರ್ವದಲ್ಲಿ ಬಾಯಿ ಮಾತಿನ ಮೂಲಕ ಕೇಳಿದ್ದೇವೆ. 2021ರಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಿಸಿದ್ದೇವೆ. ಆ ಪೂರ್ವದಲ್ಲಿ ಒತ್ತುವರಿ ಬಗ್ಗೆ ಗೊತ್ತಾಗಿಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ನಾವು ವಾಸ ಇದ್ದೇವೆ, ಉತ್ತರಕ್ಕೆ ಒತ್ತುವರಿ ಮಾಡಿದ್ದೇವೆ. ಕೆಂಪಮ್ಮನವರ ತಂದೆ ಹೆಸರು ಸುಬ್ಬನಾಯಕ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ತಂದೆ ಕರಿನಾಯಕ ಎಂದರೆ ಸರಿಯಲ್ಲ, ಸುಬ್ಬನಾಯಕ. ಕರಿನಾಯಕ ಮತ್ತು ಸುಬ್ಬನಾಯಕ ಒಬ್ಬರೇ ಎಂದರೆ ಗೊತ್ತಿಲ್ಲ. ಆದರೆ ನಾವು ಅಕ್ಕಪಕ್ಕದ ಗ್ರಾಮದವರು. ದಾವಾ ದಾಖಲಿಸುವ ಪೂರ್ವದಲ್ಲಿ ಪ್ರತಿವಾದಿಗಳು ನಮಗೆ ಗೊತ್ತಿರಲಿಲ್ಲ. ದಾವಾ ಆಸ್ತಿಯಲ್ಲಿ ನಾವು ಸ್ವಾದೀನದಲ್ಲಿರುವ ಆಸ್ತಿಗಳ ಅಕ್ಕಪಕ್ಕ ಪ್ರತಿವಾದಿಗಳಿಗೆ ಆಸ್ತಿ ಇರುವುದಿಲ್ಲ. ಈ ದಾವೆ ದಾಖಲಿಸುವವರೆಗೂ ಒ ಎಸ್ 196/2021 ಅನ್ನು ಸಲ್ಲಿಸುವ ವರೆಗೂ ನಾನು ಪ್ರತಿವಾದಿಗಳ ಜೊತೆ ಮಾತನಾಡಿಲ್ಲ. ಸರ್ವೆ ನಂ. 9 ರಲ್ಲಿ 5 ಎಕರೆ 37 ಗುಂಟೆ ಆಸ್ತಿ ಇದೆ ಎಂದರೆ ಸರಿ. ಸಂಪೂರ್ಣ ಆಸ್ತಿಯಲ್ಲಿ ಪ್ರತಿವಾದಿಗಳು ಇದ್ದಾರೆ ಎಂದರೆ ಸರಿಯಲ್ಲ. 4 ಎಕರೆ 17 ಗುಂಟೆ ಜಮೀನಿನಲ್ಲಿ 1 ಎಕರೆ 7 ಗುಂಟೆ ಒತ್ತುವರಿ ಮಾಡಿದ್ದಾರೆ ಎಂದು ವಕೀಲರಿಗೆ ತಿಳಿಸಿಲ್ಲ. ಆ ರೀತಿ ವಿವರಗಳನ್ನು ನನ್ನ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಆ ರೀತಿ ಹೇಳಿಲ್ಲ ಎನ್ನುತ್ತಾರೆ. ವಿವರಗಳು ತಿಳಿಯದಿದ್ದರೂ ಸಹ

ಪ್ರತಿವಾದಿಗಳು ಸಲ್ಲಿಸಿದ್ದ ದಾವೆಗೆ ಪ್ರತಿಕೂಲವಾಗುವಂತೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 4 ಎಕರೆ 17 ಗುಂಟೆ ಪೂರ್ವದ ಕಡೆಗೆ ಮರಪ್ಪ ಅಂದರೆ ನನ್ನ ತಾತನ ಜಮೀನು, ಪಶ್ಚಿಮಕ್ಕೆ ನೀಲಗಿರಿ ಊಟಿ ರಸ್ತೆ, ದಕ್ಷಿಣಕ್ಕೆ ಕಾಳಪ್ಪ ರವರ ಜಮೀನು, ಉತ್ತರಕ್ಕೆ ಸರ್ವೆ ನಂ. 9/2ರ ಜಮೀನು.

1 ಎಕರೆ 7 ಗುಂಟೆ ಪೂರ್ವಕ್ಕೆ ದಿವಾಕರ್ ರೆಡ್ಡಿ, ಪಶ್ಚಿಮಕ್ಕೆ ಊಟಿ ರಸ್ತೆ ಉತ್ತರಕ್ಕೆ 9/2, ದಕ್ಷಿಣಕ್ಕೂ ದಿವಾಕರ್ ರೆಡ್ಡಿರವರ ಜಮೀನು ಇರುತ್ತದೆ. ಒತ್ತುವರಿಯಾದ ನಂತರ ಆ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಯಾವುದೇ ಅರ್ಜಿ ಕೊಟ್ಟಿಲ್ಲ. 2022ರಲ್ಲಿ ಅಳತೆ ಮಾಡಿಸಿದ್ದೆ, ಅಳತೆಯ ಅರ್ಜಿಯನ್ನು ಕೊಟ್ಟು ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ದಾಖಲೆಗಳ ಪೈಕಿ ಅಳತೆ ಅರ್ಜಿ ಹಾಗೂ ಇತರೆ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಒತ್ತುವರಿಯಾಗದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.